ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :-

ಅ) 362. ಇವುಗಳಲ್ಲಿ 312 ಪಾಠಶಾಲೆಗಳು ಕಾರ್ಯನಿರ್ವಹಿಸುತ್ತದೆ.

ಆ) 440.

ಇ) ಬಂದಿದೆ.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ವಿಷಯ :- ಎಂ.ಪಿ.ಎಡ್. ಕೋರ್ಸಿಗೆ ಆಯ್ಕೆಯಾದ ದೈಹಿಕ ಶಿಕ್ಷಕರುಗಳಿಗೆ ಸಂಬಂಧಪಟ್ಟಂತೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 787 (1517)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1993-94, 1994-95, 1995-96 ಮತ್ತು 1996-97 ರಲ್ಲಿ ಎಂ.ಪಿ.ಎಡ್. ಕೋರ್ಸಗೆ ನಿಯೋಜನೆ ಮೇರೆಗೆ ಆಯ್ಕೆಯಾದ ದೈಹಿಕ ಶಿಕ್ಷಣ ಶಿಕ್ಷಕರುಗಳ ಸಂಖ್ಯೆ ಎಷ್ಟು; ಈ ಆಯ್ಕೆಗೆ ಬಂದಿರುವ ಅರ್ಜಿಗಳು ಎಷ್ಟು;

ಆ) ಈ ಆಯ್ಕೆಯನ್ನು ಯಾವ ಆಧಾರದ ಮೇಲೆ ಮಾಡಲಾಗುತ್ತದೆ; (ವಿವರ ನೀಡುವುದು)

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಎಂ.ಪಿ.ಇಡಿ. ಕೋರ್ಸಿಗೆ ನಿಯೋಜಿಸಿರುವ ವಿವರಗಳು.

	ಆಯ್ಕೆಯಾದ ದೈಹಿಕ ಶಿಕ್ಷಕರುಗಳ ಸಂಖ್ಯೆ	ಆಯ್ಕೆಗೆ ಬಂದಿರುವ ಅರ್ಜಿಗಳು
1993-94	20	80
1994-95	15	284
1995-96	20	162

1996-97 ಕ್ಕೆ ಸಂಬಂಧಿಸಿದ ಪ್ರಕ್ರಿಯೆಯು ಇನ್ನೂ ಪೂರ್ಣಗೊಂಡಿಲ್ಲ.

ಆ) ಜೇಷ್ಠತೆ ಹಾಗೂ ವಯೋಮಿತಿಯನ್ನಾಧರಿಸಿ ಮಾಡಲಾಗುತ್ತಿದೆ.